**ಹನಮಂತ ಕೊಪ್ಪದ**

## ಪ್ರೇಮಲೋಕ

'ನೀವು ಈ ಡ್ರೆಸ್‌ನಲ್ಲಿ ದೇವತೆ ಹಾಗೆ ಕಾಣಿಸುತ್ತಿದ್ದೀರಿ' ಎಂದ. ಅವನ ಮಾತಿಗೆ ಅವಳು ಮುಗುಳ್ನಕ್ಕಳು. ಈ ಮೂಲಕ ಮತ್ತಿಬ್ಬರು ಪ್ರೇಮಲೋಕಕ್ಕೆ ಸೇರ್ಪಡೆಯಾದರು.

★★★

## ಮಳೆ

ಮೋಡ ಕವಿದ ವಾತಾವರಣ ನೋಡಿ ಮಗ, 'ಇಂದು ಮಳೆ ಬಂದರೆ ಕ್ರಿಕೆಟ್ ಪಂದ್ಯ ನಿಂತುಹೋಗುತ್ತದ್ದಲ್ಲ?' ಎಂದು ಚಡಪಡಿಸುತ್ತಿದ್ದ. ಅತ್ತ ಕಡೆ ಅಪ್ಪ ಮಳೆ ಬರದಿದ್ದರೆ ಬೆಳೆದ ಬೆಳೆಯಲ್ಲ ನಾಶವಾಗುತ್ತದೆಯಲ್ಲ ಎಂಬ ಗಾಢ ಚಿಂತೆಯಲ್ಲಿ ಮುಳುಗಿದ್ದ.

★★★

## ಅಗತ್ಯವಿಲ್ಲ

'ಈ ದಾರಿ ಎಲ್ಲಿಗೆ ಹೋಗುತ್ತದೆ?'
'ಮೊದಲು ನೀವೆಲ್ಲಿಗೆ ಹೋಗಬೇಕು, ಹೇಳಿ.'
'ಗೊತ್ತಿಲ್ಲ...'
'ಹಾಗಾದರೆ, ನಿಮಗೆ ಅದನ್ನು ಹೇಳುವ ಅಗತ್ಯವಿಲ್ಲ.'

## ಅಂತರ್ಜಾತಿ ಮದುವೆ

'ನಿನ್ನದು ಅಂತರ್ಜಾತಿ ಮದುವೆಯಂತೆ, ಹೌದಾ?' ಅವಳು ಇವಳನ್ನು ಕೆದಕಬೇಕೆಂತದೇ ಕೇಳಿದಳು.

'ಹೌದು, ಅವನು ಗಂಡು ಜಾತಿ, ನಾನು ಹೆಣ್ಣು ಜಾತಿ. ನಮ್ಮಿಬ್ಬರ ಮದುವೆಯಲ್ಲ, ಇಲ್ಲಿಯವರೆಗೆ ನಡೆದಿರುವ ಎಲ್ಲಾ ವಿವಾಹಗಳು ಅಂತರ್ಜಾತಿ ಮದುವೆಗಳೇ' ಎಂದ ಇವಳ ಉತ್ತರ ತೀಕ್ಷ್ಣವಾಗಿತ್ತು.

